## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ,ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ – ಅಂತಿಮ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/399/ಗ್ರಾಪಂಕಾ/2013, ಬೆಂಗಳೂರು, ದಿನಾಂಕ:03-12-2013.
2. ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:LOK/INQ/14-A/502/2013, ದಿನಾಂಕ: 16.04.2018.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/INQ/14-A/502/2013, ದಿನಾಂಕ:19-04-2018.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/242/ಗ್ರಾಪಂಕಾ/2018, ದಿನಾಂಕ:22.05.2018
5. ಶ್ರೀ ಜಿ. ಮರಿಯಣ್ಣ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 10.08.2018

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಆದರಂತೆ ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

"Sri G.Mariyanna,Retired Secretory, Sonnenahalli Grama Panchayathi, Bangalore North Taluk, Bangalare Urban District, Bangalore, failed to take necessary permission from the head of department or the Government to acquire movable and immovable property and thereby you failed to maintain absolute integrity and devotion to duty and committed an act which is unbecoming of a Government Servant and thus you are guilty of misconducting under Rule 3(1)(i) to (iii) of KCS (Conduct) Rules 1966".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಸದರಿಯವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ "ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯ ಶೇ. 20 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

> ನಾನು ಸೊನ್ನೆನಹಳ್ಳಿ ಗ್ರಾಮ ಪಂಚಾಯತ್, ಬೆಂಗಳೂರು ಉತ್ತರ ತಾಲ್ಲೂಕು ಇಲ್ಲಿ ಕಾರ್ಯದರ್ಶಿಗಳಾಗಿ ದಿನಾಂಕ: 01.06.2006 ರಿಂದ 31.08.2006 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಇವರ ವಿರುದ್ಧ ಶ್ರೀಮತಿ. ಅನ್ನಪೂರ್ಣೇಶ್ವರಿ ನಂ. 104 ರಾಜನ್‌ಕುಂಟೆ ಯಲಹಂಕ, ಬೆಂಗಳೂರು ದಕ್ಷಿಣ, ಎಂದು ವಿಳಾಸ ನೀಡಿ ಸಲ್ಲಿಸಿದ ದೂರನ್ನು ಕೆ.ಎಲ್.ಎ ಕಾಯ್ದೆ ಕಲಂ 9 ರ ಅಡಿಯಲ್ಲಿ ತನಿಖೆ ಮಾಡಲಾಗಿರುತ್ತದೆ ಎಂದು ಸಾಕ್ಷಿಗಳು ಹೇಳಿದ್ದಾರೆ ಅದರೆ ಡಿ.ಜಿ.ಓ ರವರು ಸಲ್ಲಿಸಿದ ಆಕ್ಷೇಪಣೆ ಮೇಲೆ ಪಿರ್ಯಾದಿಯವರು ಯಾವುದೇ ಮರುಹೇಳಿಕೆ ಸಲ್ಲಿಸಿರುವುದಿಲ್ಲ ಹಾಗೂ ಇವರು ವಿಚಾರಣೆಗೆ ಹಾಜರು ಆಗಿ ತಮ್ಮ ದೂರುಗಳು ನಿಜವಾಗಿರುತ್ತದೆ ಎಂದು ವಿಚಾರಣೆಯಲ್ಲಿ ಭಾಗವಹಿಸಿ ಆರೋಪಗಳು ಸಾಬೀತುಪಡಿಸಿರುವುದಿಲ್ಲ. ಆದರೆ ವಿಚಾರಣಾಧಿಕಾರಿಗಳು ಸದರಿ ದೂರುದಾರರನ್ನು ವಿಚಾರಣೆಗೆ ಕರೆಸಿ ಸಾಕ್ಷಿ ಹೇಳಿಕೆ ಪಡೆಯಲು ಸಾಕಷ್ಟು ಪ್ರಯತ್ನ ಮಾಡಿ ವಿಫಲರಾಗಿರುತ್ತೇವೆ ಎಂದು ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿ ಕಂಡಿಕೆ 11 ರಲ್ಲಿ ಉಲ್ಲೇಖಿಸಿರುತ್ತಾರೆ. ಅದರೆ ಮಾನ್ಯರು ದೂರುದಾರರನ್ನು ವಿಚಾರಣೆಗೆ ಹಾಜರಾಗುವಂತೆ ಕೆ.ಸಿ.ಎಸ್ (ಸಿ.ಸಿ.ಎ) ನಿಯಮ 28 (2) ರ ನಿಯಮ ಬಳಕೆ ಮಾಡಿ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿ ಸಾಕ್ಷಿಗಳನ್ನು ವಿಚಾರಣೆಗೆ ಹಾಜರಾಗುವಂತೆ ಯಾವುದೇ ಪ್ರಕಟಣೆ/ತಿಳುವಳಿಕೆ ನೋಟಿಸ್‌ನ್ನು ದಿನ ಪತ್ರಿಕೆಗಳ ಮೂಲಕ ನೀಡಿರುವುದಿಲ್ಲ. ಇಲ್ಲಿ ಪಿರ್ಯಾದಿಯವರು ವಿಚಾರಣೆಗೆ ಕಡ್ಡಾಯವಾಗಿ ಹಾಜರಾಗಿ ತಾವು ಹೊರಸಿದ ಆರೋಪಗಳನ್ನು ಸಾಬೀತು ಪಡಿಸಲು ಆಧ್ಯಾ ಕರ್ತವ್ಯವಾಗಿರುತ್ತದೆ. ಆದರೆ ಇವರು ವಿಚಾರಣೆಗೆ ಗೈರು ಹಾಜರು ಆಗಿದ್ದನ್ನು ಪರಿಶೀಲಿಸಿದಾಗ ಯಾರೋ ಶ್ರೀಮತಿ. ಅನ್ನಪೂಣೇಶ್ವರಿ ರವರ ಹೆಸರಿನಲ್ಲಿ ಅನಾಮದೇಯ ದೂರು ನೀಡಿರುತ್ತಾರೆ. ಹಾಗೂ ಈ ಪ್ರಕರಣದ ಹಿಂದೆ ಯಾವುದೋ ಒಂದು ಕಾಣದ ಕೈ ಡಿ.ಜಿ.ಓ ರವರ ವಿರುದ್ಧ ಸುಳ್ಳು ದೂರನ್ನು ಸೃಷ್ಟಿ ಮಾಡಿರುತ್ತಾರೆ ಎಂಬುದು ಇಲ್ಲಿ ನಿಖರವಾಗಿ ಹೇಳಬಹುದಾಗಿದೆ. ಈ ಅಂಶಗಳನ್ನು ಪರಿಶೀಲಿಸಿ ಅನಾಮಧೇಯ ದೂರನ್ನು ನಿಯಮ 9 ರ ಅಡಿಯಲ್ಲಿ ತನಿಖೆ ಮಾಡಲು ಅವಕಾಶ ಇರುವುದಿಲ್ಲ ಎಂದು ಪರಿಗಣಿಸಿ ನನಗೆ ನ್ಯಾಯಾ ದೊರಕಿಸಿಕೊಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

> ಶ್ರೀಮತಿ. ಅನ್ನಪೂಣೇಶ್ವರಿ ಇವರು ದಿನಾಂಕ: 17.05.2007 ರಂದು ನೀಡಿದೆನ್ನಲಾದ ದೂರಿಗೆ ನಾನು 2 ಬಾರಿ ಆಕ್ಷೇಪಣೆ ಸಲ್ಲಿಸಿ ಇವರ ದೂರುಗಳನ್ನು ಆಧಾರ ರಹಿತವಾಗಿರುತ್ತದೆ ಎಂದು ತಿಳಿಸಿ ನನ್ನ ಪರ ಇದ್ದಂತಹ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸಿ ನನ್ನ ಮಗಳ ಹೆಸರಿನಲ್ಲಿ ಮನೆ ನಂ. 714, 4ನೇ ಕ್ರಾಸ್. ಕೆಂಗೇರಿ ಉಪನಗರ ಇಲ್ಲಿ ಖರೀದಿಸಿದ ಮನೆ ಪಿತ್ರಾರ್ಜಿತ ಆಸ್ತಿಯಿಂದ ಹಿಸ್ಸೆಯಾಗಿ ಬಂದ ಹಣ ರೂ. 5,02,000/– ರೂಪಾಯಿಗಳ ಪೈಕಿ ರೂ. 4,02,000/– ಗಳ ಮೌಲ್ಯದಲ್ಲಿ ಮೇಲ್ಕಂಡ ಮನೆ ನಮ್ಮ ಅಣ್ಣನವರಾದ ಶ್ರೀ. ವೆಂಕಟರಮಣಪ್ಪ ನವರು ಮಗಳು ಕುಮಾರಿ ತ್ರಿವೇಣಿಯವರ ಹೆಸರಿನಲ್ಲಿ ಖರೀದಿಸಲಾಗಿದ್ದು ಇದರ ಕ್ರಯ ಪತ್ರ ನಿ.ಪಿ–7 ರಲ್ಲಿ ತನಿಖೆ ಹಾಜರ್ ಪಡಿಸಿರುತ್ತೇನೆ ಹಾಗೂ ದಿ: 01.01.1999 ರಂದು ನಿ.ಪಿ–8 ರ

ಮೂಲಕ ಇಲಾಖೆಗೆ ತಿಳಿಸಲಾಗಿರುತ್ತದೆ. ಮಗಳು ಐ.ಟಿ ಕಂಪನಿಯಲ್ಲಿ ಉದ್ಯೋಗಿ ಆಗಿದ್ದು ಸ್ವತಂತ್ರವಾಗಿ ಜೀವನ ಮಾಡುತ್ತಿದ್ದಾಗ ನನ್ನ ಅನುಮತಿ ಇಲ್ಲದೆ ವ್ಯಾಗನ್ನರ್ ಕಾರನ್ನು ಖಾಸಗಿಯವರಿಂದ ಸಾಲ ಪಡೆದು ರೆಪ್ಯೂಟೆಡ್ ಕಂಪನಿಯಿಂದ ಹೊಸ ಕಾರನ್ನು ಖರೀದಿಸಿದ ಬಗ್ಗೆ ಎಲ್ಲಾ ದಾಖಲೆಗಳನ್ನು ವಿಚಾರಣೆಯಲ್ಲಿ ಹಾಜರ್ ಪಡಿಸಿ ಕಾರು ಖರೀದಿಸಿದ ಬಗ್ಗೆ ನಿ.ಪಿ-5 ರ ಕಂಡಿಕೆ-10 ರಲ್ಲಿ ವಿವರವಾದ ಉತ್ತರ ನೀಡಿದ್ದರು ನಾನು ಸಲ್ಲಿಸಿದ ದಾಖಲೆಗಳನ್ನು ಹಾಗೂ ಸಮಜಾಯಿಷಿಯನ್ನು ತಳ್ಳಿ ಹಾಕಿ ಖರೀದಿಗೆ ಪೂರ್ವಾನುಮತಿ ಪಡೆದಿಲ್ಲ ಎಂದು ನನ್ನ ವಿರುದ್ಧ ಹೊರಸಿರುವ ಆರೋಪಗಳನ್ನು ಸಾಬೀತು ಆಗಿರುತ್ತದೆ ಎಂದು ನೀಡಿರುವ ವಿಚಾರಣೆ ವರದಿ ಮತ್ತು ಸಾಬೀತು ಆಗಿದೆ ಎನ್ನಲಾದ ಆರೋಪಗಳ ಮೇಲೆ ಮಾನ್ಯ ಉಪಲೋಕಾಯುಕ್ತರವರು-1 ಇವರು ಡಿ.ಜಿ.ಓ ರವರ ವಿರುದ್ಧ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಕ್ರಮ ಈ ಕೆಳಗೆ ನೀಡಿರುವ ಕಾರಣಗಳಿಂದ ಸರಿಯಿಲ್ಲ ಎಂದು ತಾವುಗಳು ತೀರ್ಮಾನಿಸಬೇಕಾಗಿದೆ.

ಅ) ವಿಚಾರಣೆ ವರದಿ ಕಂಡಿಕೆ 1 ರಿಂದ 3 ರ ವರೆಗೆ ನನ್ನ ಆಕ್ಷೇಪಣೆ ಏನು ಇರುವುದಿಲ್ಲ ಆದರೆ, ಪಿರ್ಯಾಧಿಯವರು ದೂರು ಫಾರಂ ನಂ.1 ರಲ್ಲಿ ತಮ್ಮ ವಾಸದ ವಿಳಾಸ ನಂ. 104, ರಾಜನುಕುಂಟೆ, ಯಲಹಂಕ ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಎಂದು ನೀಡಿರುವ ವಿಳಾಸ ನಿ.ಪಿ-2 ರಲ್ಲಿ ನೀಡಿರುವ ವಿಳಾಸಕ್ಕೆ ತಾಳೆ ಆಗುವುದಿಲ್ಲ ಹಾಗೂ ಇವರು ನೀಡಿರುವ ವಿಳಾಸದಲ್ಲಿ ನಿಖರತೆ ಇರುವುದಿಲ್ಲ. (ನಿ.ಪಿ-1 ಮತ್ತು 2 ಅನ್ನು ನೋಡಲು ವಿನಂತಿ). ಸದರಿ ನಿಶಾನೆ ದೂರು ದಾಖಲೆಗಳಿಂದ ಇಲ್ಲಿ ತಿಳಿದು ಬರುವುದೇನೆಂದರೆ ಶ್ರೀ. ಜಿ. ಮರಿಯಣ್ಣ ಇವರಿಗೆ ಆಗದಿದ್ದವರು ಶ್ರೀಮತಿ. ಅನ್ನಪೂರ್ಣೇಶ್ವರಿ ರವರ ಹೆಸರಿನಲ್ಲಿ ಯಾರೋ ಅನಾಮಧೇಯ ದೂರನ್ನು ಯಾವುದೋ ಒಂದು ಕಾಣದ ಕೈ ದೂರು ನೀಡಿರುತ್ತಾರೆ ಎಂದು ಇಲ್ಲಿ ನಿಖರವಾಗಿ ಹೇಳಬಹುದಾಗಿದೆ. ಇಲ್ಲಿ ನಿಜವಾದ ವ್ಯಕ್ತಿಯ ವಿಳಾಸ ಇಲ್ಲದ ದೂರುಗಳು ಊರ್ಜಿತವಾಗುವುದಿಲ್ಲ ಎಂದು ತೀರ್ಮಾನಿಸಿ ನಿ.ಪಿ-1, 2 ಮತ್ತು 3 ರ ದೂರುಗಳಿಗೆ ಪೂರಕವಾಗಿ ಯಾವುದೇ ಬಲವಾದ ಸಾಕ್ಷಿ ಪುರಾವೆಗಳನ್ನು ಪಿರ್ಯಾದಿಯವರು ನೀಡಿಲ್ಲದಿರುವುದರಿಂದ ಸದರಿ ದೂರುಗಳು ಸುಳ್ಳಾಗಿರುತ್ತದೆ ಎಂದು ತಿರ್ಮಾನಿಸಿ ನಿಶಾನೆ ದೂರುಗಳನ್ನು ತಳ್ಳಿ ಹಾಕಿ ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಆ) ವಿಚಾರಣೆ ವರದಿ, ಕಂಡಿಕೆ 4 ರಲ್ಲಿ ಕೆ.ಎಲ್.ಎ. ಕಾಯ್ದೆ ಕಲಂ-9 ಅಡಿಯಲ್ಲಿ ತನಿಖೆ ಮಾಡಿ ಸದರಿ ನಿಯಮ 12(3) ರ ರಲ್ಲಿ ಡಿ.ಜಿ.ಓ ರವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಆದೇಶ ನೀಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ನೀಡಿರುವ ವರದಿ ಸರಿಯಲ್ಲ. ಏಕೆಂದರೆ ಪಿರ್ಯಾದಿಯವರು ತಮ್ಮ ದೂರಿಗೆ ಪೂರಕವಾಗಿ ಯಾವುದೇ ಬಲವಾದ ಸಾಕ್ಷಿ ಪುರಾವೆಗಳನ್ನು ನೀಡಿರುವುದಿಲ್ಲ ಹಾಗೂ ಡಿ.ಜಿ.ಓ ರವರು ಸಲ್ಲಿಸಿದ ಆಕ್ಷೇಪಣೆಗಳಿಗೆ ಇವರು ಯಾವುದೇ ಮರುಹೇಳಿಕೆ ನೀಡಿಲ್ಲದಿರುವುದರಿಂದ ತನಿಖೆ ಇಲ್ಲಿ ಪೂರ್ಣವಾಗಿರುವುದಿಲ್ಲ. ಆದ್ದರಿಂದ ಪಿರ್ಯಾದಿಯವರ ಮರುಹೇಳಿಕೆ ಇಲ್ಲದೆ ನಿಯಮ 12(3) ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಕ್ರಮ ಕೆ.ಎಲ್.ಎ ಕಾಯ್ದೆ ನಿಯಮ 9 ರ ನಿಯಮಗಳಿಗೆ ವಿರುದ್ಧವಾಗಿರುತ್ತದೆ ಎಂದು ತಾವುಗಳು ತೀರ್ಮಾನಿಸಬೇಕಾಗಿದೆ ಏಕೆಂದರೆ ನಿಯಮ 12 (3) ರ ಅಡಿಯಲ್ಲಿ ಇಲಾಖಾ ವಿಚಾರಣೆಗೆ ಆದೇಶ ನೀಡಬೇಕೆಂದು ಸಲ್ಲಿಸಿದ ಪ್ರಸ್ತಾವನೆ ನಿಯಮಕ್ಕೆ ವಿರುದ್ಧವಾಗಿರುತ್ತದೆ ಎಂದು ತೀರ್ಮಾನಿಸಿ ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

"Sri G.Mariyanna,Retired Secretory, Sonnenahalli Grama Panchayathi, Bangalore North Taluk, Bangalare Urban District,

Bangalore, failed to take necessary permission from the head of department or the Government to acquire movable and immovable property and thereby you failed to maintain absolute integrity and devotion to duty and committed an act which is unbecoming of a Government Servant and thus you are guilty of misconducting under Rule 3(1)(i) to (iii) of KCS (Conduct) Rules 1966".

ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯ ಶೇ. 20 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/242/ಗ್ರಾಪಂಕಾ/2018,**
**ಬೆಂಗಳೂರು, ದಿನಾಂಕ:11-10-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರಿಗೆ "ಕರ್ನಾಟಕ ನಾಗರೀಕ ಸೇವಾ ನಿಯಮ 214(1)(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಅವರ "ಪಿಂಚಣಿಯ ಶೇ. 20 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ" ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

11/10
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, , ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
7. ಶ್ರೀ ಜಿ. ಮರಿಯಣ್ಣ, ನಿವೃತ್ತ ಕಾರ್ಯದರ್ಶಿ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯತಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ.